(ಶ್ರೀ ಎಚ್. ಕೆ. ಶಿವರುದ್ರಪ್ಪ.)
ಳನ್ನು ಕಟ್ಟಿಸಿಕೊಟ್ಟರೆ ತಕ್ಷಣ ಈ ಅನ್ಪತ್ರೆಯನ್ನು ಮುಂಜೂರುಮಾಡುತ್ತೀರಾ ?

Sri T. CHANNIAH.—That is a hypothetical question.

Health Units, Step to start in Arkalgud Taluk.

Q.—360. Sri G. A. THIMMAPPA GOWDA (Arkalgud).—

Will the Government be pleased to state :—

whether there is any proposal before the Government to start full-fledged health units in Arkalgud Taluk ?

A.—Sri T. CHANNIAH (Minister for Public Health and Local Self-Government).—

Yes. Proposals have been received from the Department and they are under the consideration of the Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಆರೋಗ್ಯ ಇಲಾಖೆಯವರು ಅವರ ಸಲಹೆಗಳನ್ನು ಯಾವಾಗ ಕಳುಹಿಸಿದರು ? ಆ ಸಲಹೆಗಳ ವಿಚಾರದಲ್ಲಿ ಸರ್ಕಾರದವರು ಏನು ಮಾಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಅರಕಲಗೂಡು, ಹೊಳೇನರಸೀಪುರ, N.E.S. Village blocks ಮತ್ತು Health Centre ಗಳನ್ನು ಈ ವರ್ಷ ಸ್ಥಾಪನೆ ಮಾಡಬೇಕೆಂದು ಉದ್ದೇಶಿಸಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರಕಾರ ಇದನ್ನು ಅನುಮೋದಿಸಿದೆಯೆ ?

ಶ್ರೀ ಟಿ. ಚನ್ನಯ್ಯ.—ಸರಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅರಕಲಗೂಡು ತಾಲ್ಲೂಕಿನ ಹೆಚ್ಚಿನ ಭಾಗ ಮಲೆನಾಡು ಪ್ರಾಂತ್ಯವಾಗಿರುವುದರಿಂದ ಅಲ್ಲಿ ಮಲೇರಿಯಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಅಷ್ಟೇನೂ ಹೆಚ್ಚಾಗಿ ಇಲ್ಲ. ಸ್ವಲ್ಪ ಇದೆಯೆಂದು ಗೊತ್ತಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಗಲೇ ಆ ಭಾಗದಲ್ಲಿ ಸ್ವಲ್ಪ ಹಣ ಖರ್ಚಾಗಿದೆ ಮತ್ತು 7-8 ಜನ ಇನ್ಸ್‌ಪೆಕ್ಟರ್‌ಗಳು ತಾಲ್ಲೂಕುಗಳಲ್ಲಿ ಕೆಲಸ ಮಾಡದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದಕ್ಕೆ ತಗಲುವ ಖರ್ಚೆಷ್ಟು ?

ಶ್ರೀ ಟಿ. ಚನ್ನಯ್ಯ.—ಸುಮಾರು ಎರಡು ಲಕ್ಷ ರೂಪಾಯಿಗಳಾಗಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೇಂದ್ರ ಸರ್ಕಾರದವರು N.E.S. area ದಲ್ಲಿ Health Centre ಗಳನ್ನು ಸ್ಥಾಪನೆ ಮಾಡಿದರೆ ತಾವೇ ಅದರ ಬಹುಭಾಗ ಖರ್ಚನ್ನು ವಹಿಸುವುದಾಗಿ ಬರೆದಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—Government of India ದವರೂ ಕೂಡ ಇದಕ್ಕೆ ತಗಲುವ ಸ್ವಲ್ಪ ಭಾಗದ ಹಣವನ್ನು ಕೊಡಲು ಒಪ್ಪಿದ್ದಾರೆ.

Second Five-Year Plan (New Railway Line).

Q.—81. Sri B. MADHAVACHAR (Bhadravati).—

Will the Government be pleased to state :—

what are the new Railway lines recommended by the Government of Mysore for inclusion in the Second Five-Year Plan ?

A.—Sri K. HANUMANTHAIYA (Chief Minister). –

It is under consideration.

ಶ್ರೀ ಬಿ. ಮಾಧವಾಚಾರ್.—ವಿವಿಧ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪಶ್ಚಿಮ ಕರಾವಳಿಗೆ ಸಮೀಪವಾಗಿ ಒಂದು ರೈಲ್ವೆ ಲೈನನ್ನು ಏರ್ಪಡಿಸಬೇಕೆಂಬುದಾಗಿ ಪಶ್ಚಿಮ ಕರಾವಳಿ ಸಮಿತಿಯವರು ಶಿಫಾರ್ಸುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಬಂದಿದೆ.

ಶ್ರೀ ಬಿ. ಮಾಧವಾಚಾರ್.—ಹಾಗಾದರೆ ಭದ್ರಾವತಿಯಿಂದ ಮಲ್ಪೆ ಬಂದರನ್ನೂ Mangalore ನ್ನೂ ರೈಲಿನಿಂದ ಸೇರಿಸುವ ವಿಚಾರವನ್ನು ಎರಡನೇ ಪಾಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸುತ್ತಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಪರಿಶೀಲನೆ ಮಾಡೋಣ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮದ್ದೂರು—ಕೊಳ್ಳೇಗಾಲ ರೈಲ್ವೆ ಲೈನನ್ನು ಹಾಕಲು ಶಿಫಾರ್ಸುಮಾಡುವುದಕ್ಕೆ ತಾವು ಒಪ್ಪಿಕೊಂಡಿರಲಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ನನಗೆ ಗೊತ್ತಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಒಂದು ನಿರ್ಣಯವೂ ಕೂಡ ಈ ಸಭೆಯಲ್ಲಿ ಪಾಸ್ ಆಗಿರುವುದರಿಂದ ಈ ರೈಲ್ವೆ ಲೈನನ್ನು ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸುತ್ತೀರಾ ?

Sri K. HANUMANTHAIYA.—If a resolution has been passed to that effect, I think it will have received due consideration.

ಶ್ರೀ ಯು. ಎಂ. ಮಾದಪ್ಪ.—ಚಾಮರಾಜನಗರ–ಸತ್ಯಮಂಗಲ ರೈಲ್ವೆ ಲೈನನ್ನು 20-25 ವರ್ಷಗಳ ಹಿಂದೆಯೇ ಸರ್ವೆಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri K. HANUMANTHAIYA.—Not only was it surveyed, but it was also included in the First Five Year Plan. For one or two reasons, the Railway Ministry has not included it in the First Five Year Plan. I wrote two or three letters to the Railway Minister to execute this project of Chamarajanagar-Satyamangala Railway Line. But unfortunately they have not tried to implement the item that has been